30

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1013 |
| ಸದಸ್ಯರ ಹೆಸರು | : | ಶ್ರೀ. ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸ ಬೇಕಾದ ದಿನಾಂಕ | : | 24-02-2023 |

| ಕ್ರ. ಸಂ. | ವಿಷಯಗಳು | ಉತ್ತರಗಳು |
|---|---|---|
| ಅ) | ಬಿಜಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ಬೇಡಿಕೆಗೆ ಸ್ಪಂದಿಸಿ ಕಳೆದ ಆಯವ್ಯಯದಲ್ಲಿ ದ್ರಾಕ್ಷಿ ವಿಂಗಡಣಾ ಘಟಕ ಹಾಗೂ ಶೀತಲಗೃಹ ಘಟಕವನ್ನು ಘೋಷಿಸಿರುವ ಕಾಮಗಾರಿ ಯಾವ ಹಂತದಲ್ಲಿದೆ. | ಬಿಜಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ಹಿತದೃಷ್ಟಿಯಿಂದ ದ್ರಾಕ್ಷಿ ವಿಂಗಡಣಾ ಘಟಕ ಹಾಗೂ ಶೀತಲಗೃಹ ಸ್ಥಾಪಿಸಲು RIDF ಟ್ರಾಂಚ್-28ರಲ್ಲಿ ನಬಾರ್ಡ್ ನೇರವಿನಿಂದ ರೂ.40.75 ಕೋಟಿಗಳಿಗೆ ಅನುಮೋದನೆ ಪಡೆಯಲು ಆರ್ಥಿಕ ಇಲಾಖೆ (ಸಾಂಸ್ಥಿಕ ಹಣಕಾಸು) ರವರ ಮೂಲಕ ನಬಾರ್ಡ್ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯು ನಬಾರ್ಡ್ ಪರಿಶೀಲನೆಯಲ್ಲಿದೆ. |
| ಆ) | ಈ ಘಟಕಗಳು ರೈತರ ಅನುಕೂಲಕ್ಕೆ ಕಾರ್ಯಾರಂಭ ಮಾಡುವುದು ಯಾವಾಗ; ಯಾವ ಹಂತದಲ್ಲಿದೆ. | ನಬಾರ್ಡ್ ಯಿಂದ ಅನುಮೋದನೆ ಪಡೆದು ಕಾರ್ಯಾರಂಭ ಮಾಡಲಾಗುವುದು. |
| ಇ) | ಸದರಿ ಕಾಮಗಾರಿಯೂ ಪಿಪಿಪಿ ಮಾದರಿಯಲ್ಲಿಯೇ ಪ್ರಾರಂಭವಾಗುತ್ತದೆಯೇ; ಅಥವಾ ಸರ್ಕಾರವೇ ನೇರವಾಗಿ ನಿರ್ಮಾಣ ಮಾಡುತ್ತದೆಯೇ; ಒಂದು ವೇಳೆ ಸರ್ಕಾರವೇ ನಿರ್ಮಾಣ ಮಾಡುತ್ತಿದಲ್ಲಿ ಯಾವ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಲಾಗುತ್ತದೆ. | ಸರ್ಕಾರವೇ ನೇರವಾಗಿ RIDF ಟ್ರಾಂಚ್-28ರ ಯೋಜನೆಯಡಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವನೆಯು ನಬಾರ್ಡ್ ಪರಿಶೀಲನೆಯಲ್ಲಿದೆ. |

HORTI 106 HGM 2023

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು